ದಿನಾಂಕಃ 17-01-2020 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ- ವಾದಿ ಪರ ಶ್ರೀ ಎಸ ಎ ಕೆ ವಕೀಲರಿಂದ

ಪ್ರತಿವಾದಿ 10 ನನ್ನ ತಂದೆ ಆಗಬೇಕು ಅಂದರೆ ಸರಿಯಲ್ಲ. ನನ್ನ ತಂದೆಯ ಹೆಸರು ಗುಡ್ಡಪ್ಪ ಮಲ್ಲಪ್ಪ ಡಂಬರಮತ್ತೂರ. ಈ ದಾವೆಯಲ್ಲಿ ನನ್ನ ತಂದೆಯು ಪಕ್ಷಗಾರನಾಗಿರುವನು. ಆದರೆ ಎಷ್ಟನೇ ಪ್ರತಿವಾದಿ ಆಗಿರುವನು ಅಂದರೆ ಹೇಳಲು ಆಗುವುದಿಲ್ಲ. ವಾದಿ ಮತ್ತು ಪ್ರತಿವಾದಿಯ ಕುಟುಂಬದ ಮೂಲಪುರುಷನ ಬಗ್ಗೆ ನನಗೆ ಗೊತ್ತಿರುವುದು. ಆತನ ಹೆಸರು ಹೊನ್ನಪ್ಪ. ಇತನಿಗೆ ಇಬ್ಬರು ಮಕ್ಕಳು. ಅವರನ್ನು ನಾನು ನೋಡಿರುವುದಿಲ್ಲ. ಆದರೆ ನಮ್ಮ ಕುಟುಂಬದವರು ಹೇಳಿರುವುದರಿಂದ ನನಗೆ ಗೊತ್ತಿರುವುದು.

ಕುಟುಂಬದ ಮೂಲಪುರುಷ ಹೊನ್ನಪ್ಪನಿಗೆ ಒಟ್ಟು ಎಷ್ಟು ಮಕ್ಕಳು ಎಂದು ನನ್ನ ಸ್ವಂತಕ್ಕೆ ಗೊತ್ತಿರುವುದಿಲ್ಲ ಅಂದರೆ ಸರಿ. ವಾದಿ, ಪ್ರತಿವಾದಿಯರು ಯಾರ ಯಾರ ಮಕ್ಕಳು ಎಂದು ನನಗೆ ಗೊತ್ತಿರುವುದು. ವಾದಿ 1 ರಿಂದ 6 ರವರು ಯಾರ ಮಕ್ಕಳು ಎಂಬುದು ನನಗೆ ನಿರ್ದಿಷ್ಟವಾಗಿ ಗೊತ್ತಿರುವುದಿಲ್ಲ. ಪ್ರತಿವಾದಿಯರು ಗೂಳಪ್ಪ ತಂದೆ ಹೊನ್ನಪ್ಪ ಡಂಬರಮತ್ತೂರನ ವಂಶಸ್ಥರು ಆಗಿರುವರು. ನಮ್ಮ ಕುಟುಂಬದ ಹಿರಿಯರು ಗೂಳಪ್ಪ. ವಾದಿಯರು ದೊಡ್ಡಬಸಪ್ಪನ ವಂಶಸ್ಥರು ಆಗಿರುವರು. ದೊಡ್ಡಬಸಪ್ಪನನ್ನು ಬಸಪ್ಪ ಎಂಬ ಹೆಸರಿನಿಂದಲೂ ಕರೆಯುತ್ತಿದ್ದರು ಅಂದರೆ ಸರಿಯಲ್ಲ. ವಾದಿ 3 ಮತ್ತು 10 ರವರು ದೊಡ್ಡಬಸಪ್ಪನ ವಂಶಸ್ಥರು ಆಗಿರುವರು.

ನಮ್ಮ ಕುಟುಂಬದ ಪೂರ್ವಜರ ವಂಶಾವಳಿ ನನಗೆ ಸ್ವಂತಕ್ಕೆ ಗೊತ್ತಿರುವುದಿಲ್ಲ. ಆದರೆ ನನ್ನ ಅಜ್ಜ ಹೇಳಿರುವ ಹಾಗೆ ನನಗೆ ನಮ್ಮ ವಂಶಾವಳಿಯ ಬಗ್ಗೆ ಮಾತ್ರ ಗೊತ್ತಿರುವುದು. ಗೂಳಪ್ಪ ಮೃತಪಟ್ಟು ಈಗ 40-45 ವರುಷಗಳು ಆಗಿರಬಹುದು. ನನಗೆ

ಈಗ 38 ವರುಷಗಳು ಆಗಿರುವವು. ನನ್ನ ಅಜ್ಜ ನಾನು ಜನ್ಮ ತಾಳಿದಾಗ ಜೀವಂತ ಇರಲಿಲ್ಲ. ನಮ್ಮ ವಂಶಾವಳಿಯ ಬಗ್ಗೆ ನನ್ನ ಮಲ್ಲಪ್ಪಜ್ಜ ಹೇಳಿರುವನು. ನಮ್ಮ ಕುಟುಂಬದ ಹಿರಿಯರ ಮಧ್ಯೆ ಹಾಗೂ ನಮ್ಮಮಧ್ಯೆ ಕುಟುಂಬದ ಆಸ್ತಿಗಳಲ್ಲಿ ಹಿಸ್ಸೆದಿಸ್ಸೆ ಮಾಡಿಕೊಂಡ ಬಗ್ಗೆ ಯಾವುದೇ ನೊಂದಾಯಿತ ವಾಟ್ನಿ ಪತ್ರದ ದಾಖಲೆ ಹಾಗೂ ನ್ಯಾಯಾಲಯದಿಂದ ವಾಟ್ನಿ ಮಾಡಿಕೊಡಿರತಕ್ಕಂತಹ ಡಿಕ್ರಿಯು ಇರುವುದಿಲ್ಲ ಆದರೆ ನಾವು ಆಸ್ತಿಯಲ್ಲಿ ವಾಟ್ನಿ ಮಾಡಿಕೊಂಡಿರುವುದಾಗಿ ಎಂದು ಸಾಕ್ಷಿ ಉತ್ತರಿಸುವರು. ಹಿರಿಯರ ಆಸ್ತಿಗೆ ಸಂಬಂಧಪಟ್ಟಂತೆ 1992-93 ನೇ ಸಾಲಿನಲ್ಲಿ 4 ಎಕರೆಗಿಂತಲೂ ಹೆಚ್ಚಿನ ವಿಸ್ತೀರ್ಣದ ಜಮೀನಲ್ಲಿ ವಾಟ್ನಿ ಮಾಡಿಕೊಂಡಿರುವರು. ಈ ಆಸ್ತಿಗೆ ಸಂಬಂಧಪಟ್ಟಂತೆ ವಾಟ್ನಿ ಮಾಡಿಕೊಂಡಂತೆ ನೊಂದಾಯಿತ ವಾಟ್ನಿ ಪತ್ರ ಇರುವುದಲ್ಲ ಆದರೆ ಡ ಎಂಟರಿ ಮಾತ್ರ ಇರುವುದು. ನಮ್ಮ ಕುಟುಂಬಕ್ಕೆ ಸ್ವತಂತ್ರವಾಗಿ ಖರೀದಿ ಮಾಡಿರುವಂತಹ ಬೇರೆ ಆಸ್ತಿಗಳು ಸಹ ಇರುವವು. ನಮ್ಮ ಕುಟುಂಬದ ಎಲ್ಲಾ ಸದಸ್ಯರ ಮೂಲ ಉದ್ಯೋಗ ಒಕ್ಕಲುತನ ಅಂದರೆ ಸರಿ. ಈ ಹಿರಿಯರಿಂದ ಬಂದಿರತಕ್ಕಂತಹ ಜಮೀನುಗಳಲ್ಲಿ ನಮ್ಮ ಕುಟುಂಬ ಸದಸ್ಯರು ಒಕ್ಕಲುತನ ಮಾಡಿ ಅದರಿಂದ ಬಂದ ಆದಾಯದಿಂದ ಈ ಉಳಿದ ಜಮೀನುಗಳನ್ನು ಸ್ವತಂತ್ರವಾಗಿ ಖರೀದಿ ಮಾಡಿರುವರು ಅಂದರೆ ಸರಿಯಲ್ಲ ನಮ್ಮ ಕುಟುಂಬದ ಸದಸ್ಯರು ಸ್ವತಂತ್ರವಾದ ಉದ್ಯೋಗ ಅಂದರೆ ಕೂಲಿ ಕೆಲಸ ಮಾಡುತ್ತಿದ್ದರು. ಈ ಕೂಲಿ ಕೆಲಸ ಮಾಡಿ ಅದರಿಂದ ಬಂದ ಆದಾಯದ ಬಗ್ಗೆ ಯಾವುದೇ ಲೆಕ್ಕಪತ್ರವನ್ನು ಇಟ್ಟಿರುವುದಿಲ್ಲ. ನಮ್ಮ ಕುಟುಂಬದ ಜಮೀನುಗಳಲ್ಲಿ ಕೂಲಿ ಕೆಲಸ ಮಾಡಲು ಗ್ರಾಮದ ಸುತ್ತಮುತ್ತಲಿನ ಜನರು ಕೂಲಿ ಕೆಲಸ ಮಾಡಲು ಬರುತ್ತಿದ್ದರು ಅಂದರೆ ಸರಿಯಲ್ಲ. ನಮ್ಮ ಮನೆತನದ ಕುಟುಂಬದ ಹಿರೇತನವನ್ನು ಕುಟುಂಬದ ಹಿರಿಯ ಸದಸ್ಯ ಮಾಡುತ್ತಿದ್ದರು ಅಂದರೆ ಸರಿ. ಮಲ್ಲಪ್ಪ ಗೂಳಪ್ಪ ಡಂಬರಮತ್ತೂರ ಎಂಬುವರು ಕುಟುಂಬದ ಹಿರೇತನ

ಮಾಡುತ್ತಿದ್ದರು. ಇತನಿಗೆ ಕುಟುಂಬದ ಆದಾಯ ಮತ್ತು ಖರ್ಚು ವೆಚ್ಚದ ಬಗ್ಗೆ ಯಾವುದೇ ಲೆಕ್ಕಪತ್ರ ವನ್ನು ನಾವು ಕೇಳಿರುವುದಿಲ್ಲ ಆ ಸಮಯದಲ್ಲಿ ಕುಟುಂಬದ ಸದಸ್ಯರು ಕೂಲಿ ಕೆಲಸ ಮಾಡಿ ಎಷ್ಟು ಹಣ ಸಂಗ್ರಹಣೆ ಮಾಡಿದ್ದರು ಎಂದು ನನಗೆ ವಯಕ್ತಿಕವಾಗಿ ಮಾಹಿತಿ ಇರುವುದಿಲ್ಲ.

ಟ್ರ್ಯಾಕ್ಟರ ವಾಹನ ಮತ್ತು ದ್ವಿಚಕ್ರ ವಾಹನ ಖರೀದಿ ಮಾಡಿದ ಬಗ್ಗೆ ಯಾವುದೇ ಲೆಕ್ಕಪತ್ರ ವನ್ನು ಇಟ್ಟಿರುವುದಿಲ್ಲ ಅಂದರೆ ಸಾಕ್ಷಿ ನುಡಿಯುವುದೇನೆಂದರೆ ಈ ಕುಟುಂಬದಲ್ಲಿ ಯಾವುದೇ ವಾಹನಗಳು ಇರುವುದಿಲ್ಲ ಎಂದು ಉತ್ತರಿಸುವರು. ನನ್ನ ಸಾಕ್ಷಿ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಯಾವುದೇ ವಾಹನಗಳು ಇರುವುದಿಲ್ಲ ಎಂದು ಹೇಳಿ ಬರೆಸಿಹಾಕಿರುವೆನು. ವಾದಿಯರು ತಮ್ಮ ವಾದಪತ್ರದ ಜೊತೆ ಲಗತ್ತಿಸಿದ ಬಗ್ಗೆ ವಂಶಾವಳಿ ಬಗ್ಗೆ ಬರೆದ ಸಂಗತಿ ನನಗೆ ಗೊತ್ತಿರುವುದಿಲ್ಲ. ಆದರೆ ಅವರು ಆಸ್ತಿಯಲ್ಲಿ ಪಾಲು ಕೇಳಿ ದಾವೆ ದಾಖಲು ಮಾಡಿರುವರು. ಹೊನ್ನಪ್ಪನಿಗೆ ಸಣ್ಣಬಸಪ್ಪ ಎಂಬ ಹೆಸರಿನ ಮಗನಿದ್ದನು ಎಂದು ವಂಶಾವಳಿಯಲ್ಲಿ ಕಾಣಿಸಿರುವ ಸಂಗತಿ ನಿಜ ಇರುವುದಿಲ್ಲ. ಈ ವಂಶಾವಳಿ ನಿಜ ಇರುವುದಿಲ್ಲ ಎಂದು ಹೇಳಿ ನಾನು ದಾಖಲಾತಿಗಳನ್ನು ಹಾಜರುಪಡಿಸಿರುವೆನು. ಸಣ್ಣಬಸಪ್ಪ ಹೊನ್ನಪ್ಪನಿಗೆ ಸಂಬಂಧ ಇರಲಿಲ್ಲವೆಂದು ನಾನು ಸುಳ್ಳು ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ.

ದಾವಾ ಶೆಡ್ಯೂಲ ಬಿ ದಲ್ಲಿ ಇರತಕ್ಕಂತಹ ರಿ ಸ ನಂ. 18/6, ರಿ ಸ ನಂ. 18/12, ರಿ ಸ ನಂ. 17/1, ರಿ ಸ ನಂ. 7, ರಿ ಸ ನಂ. 110/3, ರಿ ಸ ನಂ. 5/19, ರಿ ಸ ನಂ. 26/1 ಹಾಗೂ ರಿ ಸ ನಂ. 82/2 ಈ ಆಸ್ತಿಗಳು ನನ್ನ ಅಜ್ಜ ಸ್ವಸಂಪಾದನೆ ಮಾಡಿರತಕ್ಕಂತಹ ಆಸ್ತಿಗಳು ಆಗಿರುವವು. ದಾವಾ ಶೆಡ್ಯುಲ ಸಿ ಆಸ್ತಿಗಳು ಸಹ ನನ್ನ ಅಜ್ಜನ ಸ್ವಯಾರ್ಜಿತ ಆಸ್ತಿಗಳು ಆಗಿರುವವು. ಈ ಆಸ್ತಿಗಳನ್ನು ನಮ್ಮ ಸ್ವಂತ ಆಸ್ತಿಗಳು ಎಂದು ತೋರಿಸುವ ಸಲುವಾಗಿ

ಖರೀದಿ ದಾಖಲಾತಿಗಳು ಇರುವವು ಮತ್ತು ಭೂ-ನ್ಯಾಯಮಂಡಳಿಯಿಂದ ಹಕ್ಕು ಮಂಜೂರು ಆಗಿರುವುದು. ಈ ಜಮೀನುಗಳು ನಿಂಗಪ್ಪ ತಂದೆ ಗೂಳಪ್ಪ ಡಂಬರಮತ್ತೂರ ಇತನ ಹೆಸರಿನಲ್ಲಿ ಖರೀದಿ ಮಾಡಿರುವರು. ಈ ಆಸ್ತಿಯನ್ನು ಖರೀದಿ ಮಾಡುವ ಸಮಯದಲ್ಲಿ ನಾನು ಜನ್ಮ ತಾಳಿರಲಿಲ್ಲ. ಈ ಆಸ್ತಿ ಖರೀದಿ ಮಾಡಿರುವ ಬಗ್ಗೆ ನನ್ನ ತಂದೆ ಹೇಳಿರುವರು. ನನ್ನ ಅಜ್ಜನಿಗೆ ಹಿರಿಯರಿಂದ ಬಂದ ಆಸ್ತಿಯ ಆದಾಯವನ್ನು ಹೊರತುಪಡಿಸಿ ಬೇರೆ ಸ್ವತಂತ್ರವಾದ ಆದಾಯ ಇದ್ದ ಬಗ್ಗೆ ನನಗೆ ಸ್ವಂತಕ್ಕೆ ಮಾಹಿತಿ ಇರುವುದಿಲ್ಲ. ಆದರೆ ನನ್ನ ತಂದೆ ನನಗೆ ಆದಾಯವಿದ್ದ ಬಗ್ಗೆ ಹೇಳಿರುವರು. ದಾವಾ ಆಸ್ತಿಗಳೆಲ್ಲವೂ  ನಮ್ಮ ಕುಟುಂಬಕ್ಕೆ  ಸಂಬಂಧಪಟ್ಟಂತೆ ಸದಸ್ಯರ ಹೆಸರಿನಲ್ಲಿ ಇರುವವು ಅಂದರೆ ಸರಿ. ವಾದಿಯರು, ಪ್ರತಿವಾದಿಯರು ಕೂಡಿಯೇ ವಾಸವಾಗಿದ್ದು ದಾವಾ ಆಸ್ತಿಗಳು ಸಾಮೂಹಿಕ ಕಬ್ಜೆಯಲ್ಲಿ ಇರುವವು ಅಂದರೆ ಸರಿಯಲ್ಲ.

ನಮ್ಮ ಕುಟುಂಬದ ಹಿರಿಯರು ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಆರಟಿಎಸ/ಎಪಿಎಸಆರ 2/2010 ರ ಪ್ರಕರಣ ದಾಖಲು ಮಾಡಿದ್ದರು ಅಂದರೆ ಸರಿ. ಈ ಪ್ರಕರಣದಲ್ಲಿ ಆಸ್ತಿಗೆ ಸಂಬಂಧಪಟ್ಟಂತೆ ಹಕ್ಕನ್ನು ಸಿವಿಲ್ ನ್ಯಾಯಾಲಯದಲ್ಲಿ ನಿರ್ಧರಿಸಿಕೊಳ್ಳಿರಿ  ಅಂತಾ ಆದೇಶ ಮಾಡಿರುವರು ಅಂದರೆ ಸರಿ. ನಮ್ಮ ಮನೆಯಲ್ಲಿ ಯಾವುದೇ ದ್ವಿಚಕ್ರ ವಾಹನಗಳು ಇರುವುದಿಲ್ಲ ಎತ್ತು, ಎಮ್ಮೆಗಳು ಸಹ ಇರುವುದಿಲ್ಲ. ಈಗ ಬಾಡಿಗೆ ಆಧಾರದ ಮೇರೆಗೆ ಸಾಗುವಳಿ ಮಾಡುತ್ತಿರುವೆವು. ದಾವಾ ಶೆಡ್ಯುಲ ಬಿ, ಸಿ ಮತ್ತು ಡಿ ಆಸ್ತಿಗಳೆಲ್ಲವೂ ವಾದಿಯರು ಮತ್ತು ಪ್ರತಿವಾದಿಯರ ಕುಟುಂಬದ ಏಕತ್ರ ಘರಾಣೆಯ ಆಸ್ತಿಗಳು ಅಂತಾ ಸೂಚಿಸುವುದು ಸರಿಯಲ್ಲ. ರಿ ಸ ನಂ. 18/6, 18/12, 17/1, 7, 110/3,

5/2019, 26/1 ಹಾಗೂ 82/2 ಈ ಆಸ್ತಿಗಳು ಸ್ವಯಾರ್ಜಿತ ಆಸ್ತಿಗಳು ಎಂದು ನಾನು ಸುಳ್ಳು ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ. ನಾವು ಪ್ರತ್ಯೇಕವಾಗಿ ವಾಸವಾಗಿರುವುದಾಗಿ ಎಂದು ಸುಳ್ಳು ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ. ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇರದೇ ಇದ್ದರೂ ಸಹ ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಅಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).

ಅಸಲು ದಾವಾ ನಂ. 145/ 2017
ಡಿ ಡಬ್ಲು 2